
ಕ್ಷೀಣವಾಗಿತ್ತು.

'ನಿಂದೊಳ್ಳೆ ಕಥೆಯಾಯ್ತು ಮಾರಾಯ...ಬರೀ ಹೂಂಗುಡ್ತಿ. ನಿನ್ನಂಗೆ ಕೇಳುವವ್ರಿದ್ರೆ ಹೇಳುದು ಇನ್ನೂ ಬಾಕಿಯಿರ್ತದೆ...ಇರಲಿ, ಮತ್ತೆ ಸಿಗುವಾ. ಇನ್ನೂ ಹೇಳುದಿದೆ. ಇದೆಲ್ಲ ಹೇಳ್ಕಂಬುಕೆ ಒಂದು ಸರಿಯಾದ ಜೀವಕ್ಕಾಗಿ ತಡಪಿಸುತ್ತಿದ್ದೆ. ಅಚಾನಕ್ಕಾಗಿ ನೀನು ಸಿಕ್ಕಿದೆ ನೋಡು. ಈಗ ದೊಡ್ಡ ಕಥೆಗಾರ ಆಗಿರುವೆ ಬೇರೆ! ನಿನ್ನ ಕತೆ ಕವಿತೆಗಳನ್ನ ಆಗಾಗ ಓದಿರುವೆ. ನನ್ನಪ್ಪ ಕೊಂಕಣಿಯಾದರೂ ಕನ್ನಡಾಭಿಮಾನಿ. ಕನ್ನಡದ ಪ್ರಮುಖ ಪತ್ರಿಕೆಗಳನ್ನು ತರಿಸ್ತಿದ್ದರು. ಸಣ್ಣೆರುವಾಗಿಂದಲೇ ಸಿಕ್ಕಿದ್ದೆಲ್ಲಾ ಓದ್ತಿದ್ದೆ. ಈಗಲೂ ಓದುವ ಅಭ್ಯಾಸವಿದೆ ನಂಗೆ. ಈಗಂತೂ ಇಂಟರ್ನೆಟ್ಟಲ್ಲಿ ಎಲ್ಲ ಕನ್ನಡ ಪತ್ರಿಕೆಗಳೂ ಸಿಕ್ತವೆ. ಕತೆ-ಕವಿತೆಗಳಲ್ಲಿ ಅವ್ಯಕ್ತವಾದ ಯಾವುದಕ್ಕೋ ತಡಕಾಡುವ ನಿನ್ನ ರೀತಿ ಇಷ್ಟವಾಯ್ತು. ಹಗುರವಾಗಿ ಓದಿಸಿಕೊಳ್ಳುವಾಗಲೇ ಒಂದು ವಿಷಾದದ ಎಳೆಯನ್ನು ಎದೆಗಿಳಿಸುತ್ತಿ ಮಾರಾಯಾ. ನನ್ನ ಭಗ್ನಪ್ರೇಮವನ್ನು ನಿವೇದಿಸಿಕೊಳ್ಳಲು ನೀನೇ ಸರಿಯಾದ ವ್ಯಕ್ತಿ ಅನ್ನಿಸ್ತು. ಇದೆಲ್ಲ ಬರಿ, ಬರೆದು ಬಯಲಾಗಿಸು... ಪತನದಲ್ಲೂ ಹೊಸತನ್ನು ಚಿಗುರಿಸಬೇಕಾದ ಜವಾಬ್ದಾರಿ ಕಥೆಗಾರರದು, ಅಲ್ವಾ? ಆ ನೆಣೆಹುಲಿಯೂ ಈಗ ಎಲ್ಲಿದೆಯೋ ಗೊತ್ತಿಲ್ಲ... ಯಾರಿಗೊತ್ತು ಕಥೆ ಓದಿದರೆ ಅದಕ್ಕೂ ಗುಹೆಯಿಂದ ಹೊರಬರುವ ದಾರಿ ಕಾಣಿಸಬಹುದು'.

ಈಗ ನಾಗರತಿಗೂ ಮಾತು ಭಾರವಾದಂತಿತ್ತು. ನೆನಪುಗಳ ಭಾರಕ್ಕೆ ಅವಳು ತುಸು ದಣಿದಂತೆ ಕಂಡಳು. ಇದ್ದಕ್ಕಿದ್ದಂತೆ ಎದ್ದು ನಿಂತಳು. ಹೊಸಬಣ್ಣನೂ ನಿಂತ. ಇಸ್ಕೊನ್ ಆವರಣದಿಂದ ಹೊರಬಿದ್ದು ಕಾರ್ ಪಾರ್ಕ್ ಏರಿಯಾವರೆಗೆ ಮೌನವಾಗಿ ನಡೆದರು. ಪೃಥ್ವಿ ಥಿಯೇಟರ್ ಪಕ್ಕದ ರೋಡಲ್ಲಿ ಕಾರು ನಿಲ್ಲಿಸಿ 'ಸಿಗೋಣ' ಎಂದು ಹೊಸಬಣ್ಣನನ್ನು ಇಳಿಸಿ, ಧಾವಂತದ ರಸ್ತೆಯಲ್ಲಿ ಕಣ್ಮರೆಯಾದಳು. ಆ ನಿಬಿಡ ರಸ್ತೆಯಲ್ಲಿ ಹೊಸಬಣ್ಣ, ಕೋಟೆಬೇಣದ ಸುರಂಗದಲ್ಲಿ ದಿಕ್ಕು ತಪ್ಪಿದವನಂತೆ ಎಷ್ಟೋ ಹೊತ್ತು ನಿಂತಿದ್ದ!

*

ಸಂಜೆ ರೋಡಲ್ಲಿ ಸಿಕ್ಕಾಪಟ್ಟೆ ಟ್ರಾಫಿಕ್ ಇರುತ್ತದೆ, ಟ್ಯಾಕ್ಸಿಗಿಂತ ಟ್ರೇನೇ ಬೆಟರ್ ಅನ್ನಿಸಿ ಹೊಸಬಣ್ಣ ಲೋಕಲ್ ಹಿಡಿದಿದ್ದ. ವಾಶಿ ಬ್ರಿಜ್ ದಾಟುವಾಗ ಸೂರ್ಯ ಪಶ್ಚಿಮದಲ್ಲಿ ಕೆಂಪಾಗಿದ್ದ. ದಟ್ಟ ಹಸುರಿನ ಕಾಂಡ್ಲಾವನಗಳು ಕಪ್ಪಾಗುತ್ತಿದ್ದವು. ಖಾಡಿಯ ನೀರು ಸೌಮ್ಯವಾಗಿ ತುಳುಕಾಡುತ್ತಿತ್ತು. ಟ್ರೇನಿನೊಳಗೆ ತಂಗಾಳಿ ಬುರುಬುರು ಬೀಸುತ್ತಿತ್ತು. ಮನಸ್ಸು ಶಾಂತವಾಗಲಿ ಎಂದು ಸಮುದ್ರದಿಂದ ಬೀಸುವ ತಂಗಾಳಿಗೆ ಮುಖ ಒಡ್ಡಿದ. ಕೆಟ್ಟದಾಗಿ ಹಾಡುತ್ತ ಬಂದ ಹೆಂಗಸಿಗೆ ಒಂದಿಷ್ಟು ಚಿಲ್ಲರೆ ನೀಡಿದ. ಚಿಲ್ಲರೆಗೆ ತಡಕಾಡುವಾಗ ಕೈಗೆ ಸಿಕ್ಕಿದ ರಶೀದಿಗಳಂಥ ಹಳೆಯ ಕಾಗದಗಳ ಕಟ್ಟನ್ನು ಮುದ್ದೆಮಾಡಿ ಹೊರಗೆಸೆದ. ಅದರೊಳಗೆ ಟ್ರೇನಿನ ಮಂಥ್ಲಿಪಾಸೂ ಇದ್ದದ್ದು ಎಸೆದ ಮೇಲೇ ಬೋಧೆಯಾಯಿತು. ಟಿಸಿ ಅಡ್ಡಗಟ್ಟುವ ಆತಂಕದಲ್ಲಿ ನಾಗರತಿ ಮರೆತುಹೋದಳು!



ಕ್ಷುದ್ರ ಸಂಗತಿಯೊಂದು ಗಹನವಾದ ಸಂಗತಿಯನ್ನು ಸಸಾರದಲ್ಲಿ ಮರೆಸುವ ಪರಿಗೆ ಅಚ್ಚರಿಗೊಳ್ಳುತ್ತಾ ಮನೆ ಸೇರಿದ. ವ್ಹಿಸ್ಕಿಯನ್ನು ಗ್ಲಾಸಿಗೆ ಸುರಿದು ಒಂದು ಸಿಪ್ ಹೀರಿ, ಬೆಡ್ ಮೇಲೆ ಅಡ್ಡಬಿದ್ದ. ಹೋಗುವಾಗ ಇದ್ದ 'ನಾಗಸಂಭ್ರಮ' ಈಗ ಬೇರೆಯದೇ ಮಜಲಿನಲ್ಲಿ ಸುತ್ತುತ್ತಿತ್ತು. ಏನಾದರೂ ಬರೆಯ ಬೇಕೆನಿಸಿತು. ಮನಸ್ಸಿನ ಭಾವನೆಗಳು ಅಸ್ಪಷ್ಟವಿರುವಾಗ ಅಕ್ಷರಗಳಿಗೆ ಗಾಳ ಹಾಕುವ ಅಭ್ಯಾಸ ಅವನಿಗೆ. ಪಕ್ಕದಲ್ಲಿ ಅರ್ಧಮರ್ಧ ಕತೆ ಕಣ್ಣು ಬಿಡುತ್ತಾ ಕೂತಿತ್ತು. ಹೊಸ ಕತೆ ಬರೆಸಿಕೊಳ್ಳಲು ಖಾಲಿಪುಟಗಳೂ ಚೆಲ್ಲಾಡಿ